ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 1-8
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮಕ್ಕಳ ನ್ಯಾಯ ವ್ಯವಸ್ಥೆ ಮತ್ತು ಮಕ್ಕಳಿಗೆ ಕಲ್ಪಿಸಿದ ಪೋಷಣೆ ಮತ್ತು ರಕ್ಷಣೆಯ ಸೌಲಭ್ಯಗಳ ವಿಶ್ಲೇಷಣೆ

**ಅರುಣಾ ಬಿ**

ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅದ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

**Abstract:**

*ಮಕ್ಕಳ ನ್ಯಾಯ ಕಾಯ್ದೆ 2015 ತಿದ್ದುಪಡಿ 2021 ಮತ್ತು ಮಾದರಿ ನಿಯಮಗಳು 2016 ಮತ್ತು ತಿದ್ದುಪಡಿ ನಿಯಮಗಳು 2022ರ ಅಡಿಯಲ್ಲಿ ಪೋಷಣೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಿಗಾಗಿಯೇ ಸಾಂಸ್ಥಿಕ ಮತ್ತು ಅಸಾಂಸ್ಥಿಕ ಆರೈಕೆ ಮಾಡಲು ಕಾನೂನುನಲ್ಲಿ ಅವಕಾಶ ಕಲ್ಪಿಸಿದೆ. ಸಾಂಸ್ಥಿಕ ಆರೈಕೆಗೆ ಸರ್ಕಾರದ ಬಾಲಮಂದಿರಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳಿಂದ ಮಕ್ಕಳ ಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸಾಂಸ್ಥಿಕ ಆರೈಕೆ ಮೂಲಕ ಮಕ್ಕಳಿಗೆ ರಕ್ಷಣೆ ಮತ್ತು ಪೋಷಣೆ ನೀಡಲು ಹೆಚ್ಚು ಒತ್ತು ನೀಡಲಾಗಿದೆ. ಮಕ್ಕಳಿಗೆ ಕೌಟುಂಬಿಕ ವಾತಾವರಣವನ್ನು ಕಲ್ಪಿಸಿಕೊಟ್ಟು ಮಕ್ಕಳ ಸರ್ವೋತೋಮುಖ ಬೆಳವಣಿಗೆಗೆ ಅನುಕೂಲವಾಗುವಂತೆ ಮಕ್ಕಳ ಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸರ್ಕಾರ ನಡೆಸುವ 160 ಮತ್ತು ಸ್ವಯಂ ಸೇವಾ ಸಂಸ್ಥೆಗಳು ನಡೆಸುವ 720 ಸೇರಿದಂತೆ ರಾಜ್ಯದಲ್ಲಿ ಒಟ್ಟು 880 ಮಕ್ಕಳ ಪಾಲನಾ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ಲೇಖನದಲ್ಲಿ ಮಕ್ಕಳಿಗೆ ಕಲ್ಪಿಸಿರುವ ಪುನರ್ವಸತಿ ಸೌಲಭ್ಯಗಳನ್ನು ವಿಶ್ಲೇಷಿಸಲಾಗಿದೆ.*

**Keywords:** *ಮಕ್ಕಳ ನ್ಯಾಯ ಕಾಯ್ದೆ, ಪುನರ್ವಸತಿ ಸೌಲಭ್ಯಗಳು, ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ಪಾಲನಾ ಕೇಂದ್ರ.*

## ಪೀಠಿಕೆ

ಮಕ್ಕಳ ನ್ಯಾಯ ಕಾಯ್ದೆಯು ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳು ಮತ್ತು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳೆಲ್ಲರಿಗೂ ಅನ್ವಯಿಸುತ್ತದೆ. ಚಾಲ್ತಿಯಲ್ಲಿರುವ ಯಾವುದೇ ಇತರೆ ಕಾಯಿದೆಗಳಲ್ಲಿ ಏನೇ ಹೇಳಿದ್ದರೂ ಈ ಕಾಯ್ದೆಯು ಪೋಷಣೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳು ಮತ್ತು ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳನ್ನು ವಶಕ್ಕೆ ತೆಗೆದುಕೊಳ್ಳುವುದು, ಉಳಿಸಿಕೊಳ್ಳುವುದು, ಕಾನೂನು ಕ್ರಮಕೈಗೊಂಡು, ದಂಡ ಅಥವಾ ಕಾರಾಗೃಹವಾಸ, ಪುನರ್ವಸತಿ ಮತ್ತು ಸಾಮಾಜಿಕ ಮರುಸ್ಥಾಪನೆ, ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳ ಪುನರ್ವಸತಿ ಮತ್ತು ದತ್ತು ಪುನರ್ ಸ್ಥಾಪನೆ ಮತ್ತು ಕುಟುಂಬಗಳಲ್ಲಿ ಮರುಸೇರಿಸುವಿಕೆ ಮೊದಲಾದವುಗಳಿಗೆ ಸಂಬಂಧಿಸಿದಂತೆ ಪ್ರಕ್ರಿಯೆಗಳು, ನಿರ್ಧಾರಗಳು ಅಥವಾ ಆದೇಶಗಳು ಮಾಡುವ ಅವಕಾಶ ಕಲ್ಪಿಸಲಾಗಿದೆ. ಇದರಲ್ಲಿ ಮುಖ್ಯವಾಗಿ ಸಾಂಸ್ಥಿಕ ಮತ್ತು ಅಸಾಂಸ್ಥಿಕ ವ್ಯವಸ್ಥೆಗಳಿಗೆ ಹೆಚ್ಚು ಒತ್ತು ನೀಡಲಾಗಿದೆ.

**Please cite this article as:** ಅರುಣಾ, ಬಿ. (2024). ಮಕ್ಕಳ ನ್ಯಾಯ ವ್ಯವಸ್ಥೆ ಮತ್ತು ಮಕ್ಕಳಿಗೆ ಕಲ್ಪಿಸಿದ ಪೋಷಣೆ ಮತ್ತು ರಕ್ಷಣೆಯ ಸೌಲಭ್ಯಗಳ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 3(4), 1–8

**ಮಕ್ಕಳ ಮಂದಿರ ಗೃಹ ನಿಲಯಗಳು/ಮಕ್ಕಳ ಪಾಲನಾ ಕೇಂದ್ರಗಳು**

ಪೋಷಣೆ ಮತ್ತು ರಕ್ಷಣೆ ಇರುವ ಮಕ್ಕಳ ಪ್ರಕರಣಗಳು ವಿಚಾರಣೆ ಆಗುತ್ತಿದ್ದ ಕಾಲದಲ್ಲಿ ಮಕ್ಕಳನ್ನು ಸ್ವೀಕರಿಸಲು ಮತ್ತು ಆ ನಂತರ ಅವರ ಪೋಷಣೆ ಮತ್ತು ರಕ್ಷಣೆ ಚಿಕಿತ್ಸೆ ಶಿಕ್ಷಣ ತರಬೇತಿ ಅಭಿವೃದ್ಧಿ ಮತ್ತು ಪುನರ್ವಸತಿಗಾಗಿ ಸರ್ಕಾರವು ಸ್ವಯಂ ಆಗಿ ಅಥವಾ ಸ್ವಯಂಸೇವಾ ಸಂಸ್ಥೆಗಳ ಸಂಘಟನೆಗಳ ನಡುವೆ ಸಹಕಾರದಿಂದ ಪ್ರತಿ ಜಿಲ್ಲೆಯಲ್ಲಿ ಅಥವಾ ಜಿಲ್ಲೆಗಳ ಸಮೂಹಕ್ಕಾಗಿ ನೊಂದಾಯಿತ ಮಕ್ಕಳ ನಿಲಯಗಳನ್ನು ಸ್ಥಾಪಿಸಬಹುದು ರಾಜ್ಯ ಸರ್ಕಾರವು ಅವಶ್ಯಕತೆಗೆ ತಕ್ಕಂತೆ ಯಾವುದೇ ಮಕ್ಕಳ ನಿಲಯವನ್ನು ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗೆ ವಿಶೇಷ ಸೇವೆಗಳನ್ನು ಒದಗಿಸಲು ಅರಣ್ಯ ಎಂದು ನೇಮಿಸಬಹುದು ಪ್ರತಿಯೊಂದು ಮಗುವಿನ ವ್ಯಕ್ತಿಗತ ಪೋಷಣೆ, ರಕ್ಷಣೆ ಯೋಜನೆ, ಆಧಾರದ ಮೇಲೆ ಮಕ್ಕಳ ನಿಲಯದ ಗುಣಮಟ್ಟ ಮತ್ತು ಒದಗಿಸುವ ಸೇವೆಗಳ ವಿಧಾನಗಳನ್ನು ಸೇರಿದಂತೆ ಉಸ್ತುವಾರಿ ಮತ್ತು ನಿರ್ವಹಣೆಗಾಗಿ ರಾಜ್ಯ ಸರ್ಕಾರವು ನಿಯಮಗಳನ್ನು ರೂಪಿಸಿದೆ.

***ಭೌತಿಕ ಮೂಲ ಸೌಕರ್ಯಗಳು***

ಮಕ್ಕಳನ್ನು ವಯಸ್ಸಿಗೆ ಅನುಗುಣವಾಗಿ ಪ್ರತ್ಯೇಕಿಸಬೇಕು. 6 ವರ್ಷದೊಳಗಿನ ಮಕ್ಕಳು, 7 ರಿಂದ 11 ವರ್ಷದೊಳಗಿನ ಮಕ್ಕಳು ಮತ್ತು 12 ರಿಂದ 18 ವರ್ಷದ ಮಕ್ಕಳು ಹೀಗೆ ಪ್ರತ್ಯೇಕಿಸಿ, ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ವಸತಿಗೆ ಕೊಠಡಿ ವ್ಯವಸ್ಥೆ ಮತ್ತು ಶೌಚಾಲಯದ ವ್ಯವಸ್ಥೆ ಕಲ್ಪಿಸಬೇಕು. ಮಕ್ಕಳ ಪಾಲನಾ ಕೇಂದ್ರಗಳಲ್ಲಿ ಮಕ್ಕಳ ಸ್ನೇಹಿ ವಾತಾವರಣ ನಿರ್ಮಿಸಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರ ರಚಿಸಿದ ಮಕ್ಕಳ ಪಾಲನಾ ಕೇಂದ್ರದ ನಿಯಮಗಳು ಮತ್ತು ಬಾಲನ್ಯಾಯ ಕಾಯ್ದೆಯ ಪುಸ್ತಕ ಹೊಂದಿರಬೇಕು. ಮಕ್ಕಳು ಸಂಸ್ಥೆಯಲ್ಲಿ ಬಂಧಿಯಾಗಬಾರದು, ಮಲಗಲು ಸಾಕಷ್ಟು ಸ್ಥಳಾವಕಾಶ, ಊಟದ ಕೊಠಡಿ, ಶೌಚಾಲಯಗಳು, ಕಛೇರಿ ಕೊಠಡಿ, ಕಾರ್ಯಾಗಾರದ ಕೊಠಡಿ, ಗ್ರಂಥಾಲಯ, ಉಸ್ತುವಾರಿ ವ್ಯಕ್ತಿಯ ಕೊಠಡಿ, ಮನೋರಂಜನಾ ಕೊಠಡಿ, ಅಡುಗೆ ಕೋಣೆ, ಊಟದ ಕೊಠಡಿ, ವಿಶ್ರಾಂತಿ ಗೃಹ, ಆಪ್ತ ಸಮಾಲೋಚನೆ ಕೊಠಡಿ, ಮಕ್ಕಳ ಕಲ್ಯಾಣ ಸಮಿತಿಯ ಕೊಠಡಿ, ಆಟದ ಮೈದಾನ, ಕಂಪ್ಯೂಟರ್‌ಗಳು, ಛೇರ್, ಟೇಬಲ್‌ಗಳು, ಫರ್ನಿಚರ್‌ಗಳು, ಪ್ರಾಜಕ್ಟರ್‌ಗಳು, ಪ್ರಿಂಟರ್‌ಗಳು, ಟೆಲಿಫೋನ್, ವೆಬ್‌ಕ್ಯಾಮ್, ಕ್ಯಾಮರಾ ವ್ಯವಸ್ಥೆಗಳು ಹೊಂದಿರಬೇಕು. ಪ್ರತಿ ಮಗುವಿನ ವೈಯಕ್ತಿಕ ಬೆಳಣಿಗೆಯ ಕಡತವನ್ನು ನಿರ್ವಹಿಸಬೇಕು. ಪೋಷಣೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳು ಮತ್ತು ಕಾನೂನಿನ ಜೊತೆ ಸಂಘರ್ಷಕ್ಕಿಳಿದ ಮಕ್ಕಳ ಪಾಲನಾ ಗೃಹಗಳನ್ನು ಪ್ರತ್ಯೇಕಿಸಬೇಕೆಂದು ನಿಯಮವಿದೆ.

***ಬಟ್ಟೆ, ಹೊದಿಕೆ, ಶೌಚಾಲಯ ವ್ಯವಸ್ಥೆ***

ಮಕ್ಕಳಿಗೆ ಟಿ ಶರ್ಟ್, ಅಂಗಿ, ಪ್ಯಾಂಟ್, ಕಾಟನ್ ಬಟ್ಟೆಗಳು, ಪಾದರಕ್ಷೆ, ಕಾಟನ್ ಟವಲ್‌ಗಳು, ಸೋಪುಗಳು, ಕಾಟನ್ ಹೊದಿಕೆಗಳು, ಬಾಚಣಿಗೆ, ಕೊಬ್ಬರಿ ಎಣ್ಣೆ, ಟೂತ್ ಬ್ರಷ್, ಟೂತ್ ಪೇಸ್ಟ್, ಸೊಳ್ಳೆ ಪರುದೆ, ಶಾಲಾ ಸಮವಸ್ತ್ರ, ಸ್ಕೂಲ್ ಶ್ಯು, ಕ್ರೀಡಾ ಶ್ಯು, ಸಾಕ್ಸ್, ಸ್ಕೂಲ್ ಬ್ಯಾಗ್, ಕೈ ಕರವಸ್ತ್ರ, ದಿಂಬು, ಹೆಣ್ಣು ಮಕ್ಕಳಿಗೆ ಇದರ ಜೊತೆಗೆ ಶುಚಿಪ್ಯಾಡ್, ಸ್ಕರ್ಟ್, ಪೈಜಾಮ್, ಕುಬ್ಬಸ, ಲಂಗ, ರಾತ್ರಿ ಧರಿಸಲು ಉಡುಪುಗಳು,

***ಸ್ವಚ್ಚತೆ ಮತ್ತು ನೈರ್ಮಲ್ಯ***

ಎಲ್ಲಾ ಮಕ್ಕಳಿಗೆ ಶುದ್ದ ಕುಡುಯುವ ನೀರಿನ ಲಭ್ಯತೆ ಖಾತ್ರಿಪಡಿಸುವುದು, ಬಟ್ಟೆ ಶುಚಿಗೊಳಿಸಲು, ಸ್ನಾನಕ್ಕೆ ಬಿಸಿನೀರು, ಹಾಗೂ ಬಟ್ಟೆ ತೊಳೆಯಲು ನೀರಿನ ಲಭ್ಯತೆವಿರಬೇಕು. ಕನಿಷ್ಟ 7 ಮಕ್ಕಳಿಗೆ 1 ರಂತೆ ಶೌಚಾಲಯದ ವ್ಯವಸ್ಥೆ ಇರಬೇಕು. 10 ಮಕ್ಕಳಿಗೆ 1 ಸ್ನಾನದ ಗೃಹ ಹೊಂದಿರಬೇಕು. ವೈದ್ಯಕೀಯ ಕೇಂದ್ರವನ್ನು ಸ್ವಚ್ಚವಾಗಿಡುವುದು,

ಪ್ರತಿದಿನ ಕೊಠಡಿಗಳಲ್ಲಿ ಕಸಗೂಡಿಸಬೇಕು, ಸೊಳ್ಳೆ ಪರದೆಗಳನ್ನು ಅಳವಡಿಸಬೇಕು. ಸಾಧ್ಯವಾದಷ್ಟು ವಾಷಿಂಗ್ ಮೆಷಿನ್ ಬಳಸಬೇಕು. ಊಟದ ನಂತರ ಅಡುಗೆ ಮನೆಯನ್ನು ಮತ್ತು ಊಟದ ಕೊಠಡಿಯನ್ನು ಸ್ವಚ್ಚಗೊಳಿಸಬೇಕು.

***ದಿನಚರಿ***

ಮಕ್ಕಳ ಪಾಲನಾ ಕೇಂದ್ರಗಳಲ್ಲಿ ದಿನಚರಿಯನ್ನು ಎಲ್ಲರಿಗೂ ಕಾಣುವಂತೆ ಬೋರ್ಡ್‌ನಲ್ಲಿ ಪ್ರದರ್ಶಿಸಬೇಕು. ಮಕ್ಕಳ ಸಮಿತಿಯ ಸದಸ್ಯರು ಪಟ್ಟಿಯನ್ನು ಸಹ ಪ್ರದರ್ಶಿಸಬೇಕು. ಇದರಲ್ಲಿ ವೈಯಕ್ತಿನ ಸ್ವಚ್ಚತೆ, ಯೋಗ, ದೈಹಿಕ ವ್ಯಾಯಾಮ, ಶೈಕ್ಷಣಿಕ ತರಗತಿಗಳು, ವೃತಿ ಆಧಾರಿತ ತರಬೇತಿಗಳು, ಸಂಘಟಿಸುವ ಆಟ ಮತ್ತು ಮನೋರಂಜನೆಯ ವಿವರಗಳು, ನೈತಿಕ ಶಿಕ್ಷಣ, ಗುಂಪು ಚಟುವಟಿಕೆಗಳು, ಸಮುದಾಯ ಹಾಡುಗಳು ಮತ್ತು ಪ್ರಾರ್ಥನೆ, ರಾಷ್ಟ್ರೀಯ ಹಬ್ಬಗಳು, ಭಾನುವಾರ, ಹಬ್ಬದ ದಿನಗಳು, ಮತ್ತು ವಿಶೇಷ ದಿನಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುವುದು.

***ಪೋಷಣೆ ಮತ್ತು ಆಹಾರದ ಪ್ರಮಾಣ***

ಪ್ರತಿ ದಿನ ಮಕ್ಕಳಿಗೆ ನೀಡುವ ಪೌಷ್ಟಿಕ ಆಹಾರ, ಉಪಹಾರ, ತಿಂಡಿಗಳ ಗುಣಮಟ್ಟ ಮತ್ತು ಪ್ರಮಾಣವನ್ನು ಖಚಿತ ಪಡಿಸುವುದು. ಹೀಗೆ ಸಿದ್ದ ಪಡಿಸುವ ಮುಂಚೆ ವೈದ್ಯರನ್ನು ಹಾಗೂ ಪೌಷ್ಟಿಕ ತಜ್ಞರನ್ನು ಸಂಪರ್ಕಿಸಿ ಸಲಹೆ ಪಡೆಯುವುದು. ಕನಿಷ್ಟ ಮಟ್ಟದ ಪೌಷ್ಟಿಕತೆ, ಸಮತೋಲನಾ ಆಹಾರ ಕೊರತೆಯಾಗದಂತೆ ಕ್ರಮವಹಿಸುವುದು. ಆಹಾರದ ಪಟ್ಟಿ ಮತ್ತು ಸಮಯದ ಫಲಕವನ್ನು ಪ್ರದರ್ಶಿಸುವುದು ಕಡ್ಡಾಯವಾಗಿದೆ. ಋತುಮಾನ ಆಧಾರಿತ ಹಣ್ಣುಗಳನ್ನು ಎಲ್ಲಾ ಮಕ್ಕಳಿಗೂ ನೀಡುವುದು. ಪ್ರತಿಸಲ ಒಂದೇ ರೀತಿಯ ತರಕಾರಿಗಳು 1 ವಾರದಲ್ಲಿ ಪುನಾವರ್ತನೆ ಆಗದಂತೆ ನಿಲಯದ ಮೇಲ್ವಿಚಾರಕರು ನೋಡಿಕೊಳ್ಳಬೇಕು. ಚಿಕ್ಕ ಮಕ್ಕಳಿಗೆ ಮತ್ತು ಅನಾರೋಗ್ಯ ಪೀಡಿತ ಮಕ್ಕಳಿಗೆ ಪ್ರತ್ಯೇಕ ಆಹಾರ ಒದಗಿಸುವುದು. ರಾಷ್ಟ್ರೀಯ ಹಬ್ಬ ಹಾಗೂ ಇತರೆ ವಿಶೇಷ ದಿನಗಳಲ್ಲಿ ವಿಶೇಷ ಆಹಾರವನ್ನು ಮಕ್ಕಳಿಗೆ ಒದಗಿಸಬೇಕು. ವಿಶೇಷ ಆಹಾರ ತಯಾರಿಸುವ ಸಂದರ್ಭದಲ್ಲಿ ಮಕ್ಕಳ ಸಮಿತಿಯ ಜೊತೆ ಚರ್ಚಿಸಿ ಆಹಾರ ಸಿದ್ದಪಡಿಸಬೇಕು. ಎಲ್ಲಾ ಮಕ್ಕಳಿಗೆ ಕಬ್ಬಿಣಾಂಶದ ಮತ್ತು ಪೂರಕ ಆಹಾರವನ್ನು ಒದಗಿಸಲು ಕ್ರಮವಹಿಸಬೇಕು.

***ವೈದ್ಯಕೀಯ ಆರೈಕೆ***

ನಿರಂತರ ಲಭ್ಯವಿರುವ ಒಬ್ಬ ವೈದ್ಯರನ್ನು ಮಕ್ಕಳ ಚಿಕಿತ್ಸೆ ಮತ್ತು ತಪಾಸಣೆಗೆ ಗುರುತಿಸಬೇಕು. ಪ್ರತಿ ದಿನದ ಆರೋಗ್ಯ ತಪಾಸಣೆಗೆ ಒಬ್ಬ ಪ್ಯಾರಾಮೆಡಿಕಲ್ ನರ್ಸ್ ನೇಮಿಸಬೇಕು. ಮಗು ಸಂಸ್ಥೆಗೆ ದಾಖಲಾದ 24 ತಾಸುನೊಳಗೆ ಮತ್ತು ಮಗುವನ್ನು ಸಂಸ್ಥೆಯಿಂದ ಬಿಡುಗಡೆಗೊಳಿಸುವ 24 ತಾಸಿನೊಳಗೆ ತಪಾಸಣೆ ಮಾಡಬೆಕು. ಪ್ರತಿ ಮಗುವಿನ ವೈದ್ಯಕೀಯ ವರದಿಯ ಕಡತವನ್ನು ಪ್ರತ್ಯೇಕವಾಗಿ ನಿರ್ವಹಿಸಬೇಕು. ಮಕ್ಕಳ ಮನೋ–ಸಾಮಾಜಿಕ ಆರೈಕೆ ಮಾಡಬೇಕು, ಅವಶ್ಯವಿದ್ದಲ್ಲಿ ಮಕ್ಕಳಿಗೆ ಸೂಕ್ತ ಚಿಕಿತ್ಸೆ ಒದಗಿಸಬೇಕು. ಮಕ್ಕಳಿಗೆ ಆರೋಗ್ಯ ತಪಾಸಣೆ ಮತ್ತು ಲಸಿಕೆಗಳನ್ನು ನೀಡಬೇಕು. ಎಲ್ಲಾ ಮಕ್ಕಳ ಪಾಲನ ಗೃಹಗಳು ಪ್ರಥಮ ಚಿಕಿತ್ಸೆ ಪೆಟ್ಟಿಗೆ ಹೊಂದಿರಬೇಕು.

***ಮಾನಸಿಕ ಆರೋಗ್ಯ***

ಪಾಲನಾ ಸಂಸ್ಥೆಯು ಮಕ್ಕಳ ದುರುಪಯೋಗದಿಂದ ಮುಕ್ತವಾಗಿರಬೇಕು. ಪರಿಸ್ಥಿತಿಯನ್ನು ನಿಭಾಯಿಸಲು ಮತ್ತು ಆತ್ಮವಿಶ್ವಾಸವನ್ನು ಮರಳಿಪಡೆಯಲು ಮಕ್ಕಳಿಗೆ ಸಹಾಯ ಮಾಡುವುದು. ಮಕ್ಕಳ ಆರೈಕೆಯಲ್ಲಿ ತೊಡಗಿರುವ ಎಲ್ಲಾ ವ್ಯಕ್ತಿಗಳು ಪರಿಸರವನ್ನು ಸುಗಮಗೊಳಿಸುವ ಮತ್ತು ಸಕ್ರಿಯಗೊಳಿಸುವಲ್ಲಿ ಭಾಗವಹಿಸಬೇಕು. ಎಲ್ಲಾ ಸಂಸ್ಥೆಗಳು ಕಡ್ಡಾಯವಾಗಿ ಮಕ್ಕಳಿಗೆ ಅತ್ಯಗತ್ಯ ಚಿಕಿತ್ಸೆ ಒದಗಿಸಬೇಕು. ವೈಯಕ್ತಿಕ ಚಿಕಿತ್ಸೆಯು ಒಂದು ಪ್ರಕ್ರಿಯೆಯಾಗಿದ್ದು ಪ್ರತಿ ಸಂಸ್ಥೆಯು ಕಡ್ಡಾಯವಾಗಿ ಮಾಡಬೇಕು. ಮಾಸಿಕ

ಆರೋಗ್ಯಕ್ಕಾಗಿ ಕೆಲವು ನಿಬಂಧನೆಗಳನ್ನು ಸಂಸ್ಥೆಯು ಪಾಲಿಸಬೇಕು. ತಜ್ಞ ವೈದ್ಯರು ತಪಾಸಣೆ ನಡೆಸಿ ದೃಢೀಕರಿಸದ ಹೊರತು ಮಾನಸಿಕ ತೊಂದರೆಗೆ ಚಿಕಿತ್ಸೆ ನೀಡುವಂತಿಲ್ಲ. ಮಾನಸಿಕ ಆರೋಗ್ಯ ಚಿಕಿತ್ಸೆಗೆ ತಜ್ಞ ವೈದ್ಯರು ಮಾತ್ರ ಚಿಕಿತ್ಸೆ ನೀಡುವುದು.

***ಶಿಕ್ಷಣ ಹಾಗೂ ವೃತ್ತಿ ಆಧಾರಿತ ತರಬೇತಿ ಕಾರ್ಯಕ್ರಮಗಳು***

ಪ್ರತಿಯೊಂದು ಮಕ್ಕಳ ಪಾಲನಾ ಸಂಸ್ಥೆಗಳು ಮಕ್ಕಳ ವಯಸ್ಸಿಗೆ ಅನುಗುಣವಾಗಿ ಮಕ್ಕಳನ್ನು ಶಾಲೆಗೆ ಸೇರಿಸುವುದು ಕಡ್ಡಾಯವಾಗಿದೆ. ಶಿಕ್ಷಣ ಮಕ್ಕಳ ಮೂಲಭೂತ ಹಕ್ಕಾಗಿರುವುದ್ದರಿಂದ ಯಾವುದೇ ಮಕ್ಕಳು ಶಾಲೆಯಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ಪಾಲನಾ ಸಂಸ್ಥೆಯ ಜವಾಬ್ಧಾರಿಯಾಗಿದೆ. ವಿಶೇಷ ಅಗತ್ಯತೆ ಇರುವ ಮಕ್ಕಳಿಗೆ ವಿಶೇಷ ತರಬೇತಿ ನೀಡಲು ತರಬೇತಿದಾರರನ್ನು ನೇಮಿಸಬೇಕು.

ಇದಲ್ಲದೆ ಸಂಸ್ಥೆಯು ಮಕ್ಕಳ ವಯಸ್ಸು, ಆಸಕ್ತಿ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ಲಾಭದಾಯಕ ವೃತ್ತಿ ಆಧಾರಿತ ತರಬೇತಿಗಳನ್ನು ಸರ್ಕಾರದಿಂದ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳಿಂದ ತರಬೇತಿ ನೀಡಬೇಕು ಹಾಗೂ ಪ್ರಮಾಣ ಪತ್ರವನ್ನು ಒದಗಿಸಬೇಕು. ತರಬೇತಿ ಪಡೆಯುತ್ತಿರುವ ಮಕ್ಕಳ ಹಾಜರಾತಿ, ಅವರ ಕಲಿಕೆಯ ಪ್ರಗತಿಯ ಕಡತವನ್ನು ನಿರ್ವಹಿಸಬೇಕು ಮತ್ತು ಅದನ್ನು ಪ್ರತಿ 3 ತಿಂಗಳಿಗೊಮ್ಮೆ ಮಕ್ಕಳ ಕಲ್ಯಾಣ ಸಮಿತಿಗೆ ಒದಗಿಸಬೇಕು.

**ಮನೋರಂಜನಾ ಸೌಲಭ್ಯಗಳು**

ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳು ಮನೋರಂಜನೆ ಒಳಾಂಗಣ ಅಥವಾ ಹೊರಾಂಗಣ ಆಟಗಳನ್ನು ಆಡುವುದು. ಟೆಲಿವಿಷನ್, ಯೋಗ, ಧ್ಯಾನ, ವನಭೋಜನಾ, ಹೊರ ವಿಹಾರಯಾತ್ರೆ, ಸಾಂಸ್ಕೃತಿಕ ಕಾರ್ಯಕ್ರಮ, ಗ್ರಂಥಾಲಯ ಹಾಗೂ ಕೈತೋಟ ನಿರ್ಮಾಣಗಳಲ್ಲಿ ಮಕ್ಕಳನ್ನು ತೊಡಗಿಸುವುದು. ಮಕ್ಕಳಿಗೆ ಆಟವಾಡಲು ಸಾಕಷ್ಟು ಸ್ಥಳಾವಕಾಶ ಒದಗಿಸಬೇಕು. ಮಕ್ಕಳಿಗೆ ಸಂಯೋಜಿಸುವ ವನಭೋಜನಾ, ಹೊರ ವಿಹಾರಯಾತ್ರೆಯು ವಿಜ್ಞಾನ ಸಮಾಜ ಪರಿಸರ ಶಿಕ್ಷಣಕ್ಕೆ ಹೊಂದಿಕೊಂಡಿರಬೇಕು. ಕನಿಷ್ಟ 3 ತಿಂಗಳಿಗೊಮ್ಮೆ ಆಟಗಳು, ಮನೋರಂಜನಾ ಕಾರ್ಯಕ್ರಮವನ್ನು ಆಯೋಜಿಸಿ ಸ್ಪರ್ಧೆ ಏರ್ಪಡಿಸಿ ಮಕ್ಕಳಿಗೆ ಸೂಕ್ತ ಬಹುಮಾನ ನೀಡಬೇಕು ಮತ್ತು ಪ್ರೋತ್ಸಾಯಿಸಬೇಕು. ಗ್ರಂಥಾಲಯವು ಮಕ್ಕಳ ಸ್ನೇಹಿಯಾಗಿರಬೇಕು, ದಿನ ಪತ್ರಿಕೆಗಳು, ವಾರ, ಪಾಕ್ಷಿಕ ಪತ್ರಿಕೆಗಳು, ಚಿತ್ರಪಟಗಳು, ಚಿತ್ರಗಳನ್ನು ಹೊಂದಿರುವ ಪುಸ್ತಕಗಳು, ಆಡಿಯೋ, ವಿಡಿಯೋ ಡಿಜಿಟಲ್ ಆಧಾರಿತ ವ್ಯವಸ್ಥೆಗಳು ಮಕ್ಕಳಿಗೆ ಲಭ್ಯವಾಗಬೇಕು. ಮಕ್ಕಳಿಗೆ ತೋಟಗಾರಿಕೆಯ ತಂತ್ರಜ್ಞರು ನೀಡುವ ಸಲಹೆಗಳ ಆಧಾರದಲ್ಲಿ ಸಾಕಷ್ಟು ತೋಟಗಾರಿಕೆ ಮಾಡಲು ಸ್ಥಳಾವಕಾಶ ಕಲ್ಪಿಸಬೇಕು. ಮಕ್ಕಳನ್ನು ಉತ್ತೇಜಿಸಲು ಅವರಿಗೆ ಸಂಗೀತಾ, ನೃತ್ಯ, ಮನೋರಂಜನೆಗಳನ್ನು ಆಯೋಜಿಸುವುದು. ಸಂಸ್ಥೆಯ ಬೆಂಬಲ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದಿಂದ ಹೆಚ್ಚು ಪರಿಣಾಮಕಾರಿಯಾಗಿ ಆಯೋಜಿಸುವುದು ಸಂಸ್ಥೆಯ ಕರ್ತವ್ಯವಾಗಿರುತ್ತದೆ.

**ವ್ಯವಸ್ಥಾಪಕ ಸಮಿತಿ**

ಪ್ರತಿ ಮಕ್ಕಳ ಪಾಲನಾ ಸಂಸ್ಥೆ ಬಾಲಮಂದಿರಗಳು /ಮಕ್ಕಳ ಪಾಲನಾ ಕೇಂದ್ರಗಳನ್ನು ಮೌಲ್ಯಮಾಪನ ವ್ಯವಸ್ಥಾಪಕ ಸಮಿತಿಯಿರಬೇಕು.

**ಮಕ್ಕಳ ಕಲ್ಯಾಣ ಸಮಿತಿ**

ಬಾಲ ನ್ಯಾಯ ಕಾಯ್ದೆ (ಮಕ್ಕಳ ರಕ್ಷಣೆ ಮತ್ತು ಪೋಷಣೆ) 2015 ಪರಿಚ್ಛೇದ 27ರಲ್ಲಿ ಉಲ್ಲೇಖಿಸಿದಂತೆ ರಚಿತವಾದ ಕಾನೂನು ಬದ್ಧ ಸಂವಿಧಾನಾತ್ಮಕ ಸಂಸ್ಥೆಯೇ ಮಕ್ಕಳ ಕಲ್ಯಾಣ ಸಮಿತಿ. ರಾಜ್ಯ ಸರ್ಕಾರವು ತಮ್ಮ ರಾಜ್ಯಪತ್ರದಲ್ಲಿ ಪ್ರಕಟಿಸಿ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಅಥವಾ ಹೆಚ್ಚಿನ ಜನಸಂಖ್ಯೆ ಇದ್ದಲ್ಲಿ ಒಂದಕ್ಕಿಂದ ಹೆಚ್ಚು ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಿ, ಸಮಿತಿಯು

ಈ ಕಾಯ್ದೆಯಲ್ಲಿ ವ್ಯಾಖ್ಯಾನಿಸಿ ಬರುವಂತಹ ಪೋಷಣೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಅನವು ಮಾಡಿಕೊಡಬೇಕು ಮತ್ತು ಸೂಚನೆ ಹೊರಡಿಸಿದ ಎರಡು ತಿಂಗಳ ಒಳಗೆ ಮಕ್ಕಳ ಕಲ್ಯಾಣ ಸಮಿತಿಯ ಎಲ್ಲಾ ಸದಸ್ಯರಿಗೆ ಸೂಕ್ತ ತರಬೇತಿಯನ್ನು ಸರ್ಕಾರ ನೀಡಬೇಕು.

ಆಯಾ ಸಮಿತಿಗಳು ಕಾಯ್ದೆಯಲ್ಲಿನ ನಿರ್ದಿಷ್ಟ ಅಧಿಕಾರಗಳನ್ನು ಬಳಸಿ, ರಾಜ್ಯ ಸರ್ಕಾರವು ಸೂಕ್ತವೆಂದು ಪರಿಗಣಿಸಲ್ಪಡುವ ಒಬ್ಬ ಅಧ್ಯಕ್ಷರು ಮತ್ತು ನಾಲ್ಕು ಜನ ಸದಸ್ಯರನ್ನು ಸಮಿತಿಗೆ ನೇಮಿಸಬೇಕು. ಇನ್ನೊಬ್ಬರು ಮಕ್ಕಳ ವಿಚಾರಗಳನ್ನು ಕುರಿತು ನುರಿತ ವ್ಯಕ್ತಿಗಳಾಗಿರಬೇಕು. ಕನಿಷ್ಟ 7 ವರ್ಷವಾದರೂ ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿರಬೇಕು. ಇದರಲ್ಲಿ ಕನಿಷ್ಠ ಒಬ್ಬರಾದರೂ ಮಹಿಳೆಯ ಇರುವುದು ಕಡ್ಡಾಯವಾಗಿದೆ.

***ಮಕ್ಕಳ ಕಲ್ಯಾಣ ಸಮಿತಿ ಕಾರ್ಯಕ್ರಮ***

ಮಕ್ಕಳ ಕಲ್ಯಾಣ ರಕ್ಷಣೆಯ ಮೇಲೆ ಪರಿಣಾಮ ಬೀರುವ ಸಂಬಂಧಿತ ಎಲ್ಲಾ ವಿಷಯಗಳ ಕುರಿತು ಈ ಕಾಯ್ದೆಯಡಿ ತನಿಖೆ ಸೂಕ್ತ ತನಿಖೆ ನಡೆಸುವುದು. ಕೆಲವು ಸಂದರ್ಭಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿ ಅಥವಾ ಮಕ್ಕಳ ತಜ್ಞರನ್ನು ನೇಮಿಸಿ ತನಿಖೆ ನಡೆಸಬಹುದು. ಜಿಲ್ಲೆಯ ಪರಿವೀಕ್ಷಣಾಧಿಕಾರಿಗಳು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ಸಾಮಾಜಿಕ ಕಾರ್ಯಕರ್ತರಿಗೆ ಸಾಮಾಜಿಕ ತನಿಖೆಯನ್ನು ನಡೆಸಿ ಅದರ ವರದಿಯನ್ನು ಸಮಿತಿಯ ಮುಂದೆ ಮಂಡಿಸಬೇಕೆಂದು ನಿರ್ದೇಶಿಸುವುದು. ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳನ್ನು ನೋಡಿಕೊಳ್ಳಲು "ಅರ್ಹ ವ್ಯಕ್ತಿ" ಎಂದು ಘೋಷಿಸಲು ತನಿಖೆಯನ್ನು ನಡೆಸುವುದು. ಅರ್ಹವ್ಯಕ್ತಿ ಎಂದು ಪರಿಗಣಿಸಲು ನಿರ್ವಹಿಸಬೇಕಾದ ಸಾಮಾಜಿಕ ತಪಸಾಣೆ ವರದಿ ಇನ್ನಿತರ ಪ್ರಕ್ರಿಯೆಗಳನ್ನು ಪಡೆದುಕೊಳ್ಳುವುದು. ಮಕ್ಕಳ ಕಲ್ಯಾಣ ಸಮಿತಿಯ ಕಾರ್ಯಕಲಾಪ ಮತ್ತು ಜವಾಬ್ದಾರಿಗಳು ಈ ಕೆಳಗಿನವುಗಳಂತೆ ಒಳಗೊಂಡಿದೆ. ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಪೋಷಣೆ ಮತ್ತು ರಕ್ಷಣೆ ಕೋರಿ ಹಾಜರುಪಡಿಸಿದ ಮಕ್ಕಳನ್ನು ಸ್ವೀಕರಿಸಿ, ಅವರ ಪರಿಸ್ಥಿತಿಯನ್ನು ಗಮನಿಸಿ ಸೂಕ್ತ ರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದು.

***ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಬೇಕು***

ಪೋಷಕತ್ವ ವಂಚಿತ ಹಾಗೂ ಪೋಷಣೆ ಮತ್ತು ರಕ್ಷಣೆ ಇರುವ ಮಕ್ಕಳನ್ನು ಯಾವುದೇ ಪೊಲೀಸ್ ಅಥವಾ ಮಕ್ಕಳ ವಿಶೇಷ ಪೊಲೀಸ್ ಘಟಕ ಅಥವಾ ನಿಗದಿತ ಪೊಲೀಸ್ ಅಧಿಕಾರಿ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಯಾವುದೇ ಅಧಿಕಾರಿ ಅಥವಾ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಕಾರ್ಮಿಕ ಕಾಯ್ದೆಯ ಅಡಿಯಲ್ಲಿ ನೇಮಕಗೊಂಡಿರುವ ಅಧಿಕಾರಿಗಳು ಪೋಷಕತ್ವ ವಂಚಿತ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರು ಪಡಿಸಬಹುದು.

ಅಧಿಕಾರಿಗಳು 24 ಗಂಟೆ ಒಳಗಾಗಿ ಪೋಷಕತ್ವ ವಂಚಿತ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಬಹುದು, ಕೇವಲ ಸರ್ಕಾರ ಅಧಿಕಾರಿಗಳಲ್ಲದೆ ವೈದ್ಯರು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಸಹ ಪೋಷಕತ್ವ ವಂಚಿತ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರು ಪಡಿಸಬಹುದಾಗಿರುತ್ತದೆ. ಅಥವಾ ಮಗುವೇ ಸ್ವಯಂ ಆಗಿ ಸಮಿತಿಯ ಎದುರು ಆಶ್ರಯ ಕೋರಿ ಹಾಜರಾಗಬಹುದಾಗಿರುತ್ತದೆ. ಮಕ್ಕಳ ಸಂರಕ್ಷಣೆಗೆ ಸರ್ಕಾರ ರೂಪಿಸಿರುವ ನಿಯಮಗಳನ್ನು ಮಕ್ಕಳ ಕಲ್ಯಾಣ ಸಮಿತಿಯು ಪಾಲಿಸುವುದು ಕರ್ತವ್ಯವಾಗಿರುತ್ತದೆ.

***ಪೋಷಕರಿಂದ ಪ್ರತ್ಯೇಕವಾದ ಮಕ್ಕಳು ಕಂಡು ಬಂದಾಗ ಕಡ್ಡಾಯವಾಗಿ ವರದಿ ಮಾಡಲೇಬೇಕು***

ಯಾವುದೇ ನರ್ಸಿಂಗ್ ಹೋಮ್, ವ್ಯಕ್ತಿ ಅಥವಾ ಪೊಲೀಸ್ ಅಥವಾ ಯಾವುದೇ ಸಂಸ್ಥೆಗಳು ಅಥವಾ ಆಸ್ಪತ್ರೆ ಅಥವಾ ಹೆರಿಗೆ ಆಸ್ಪತ್ರೆ ಅಥವಾ ದಾರಿಯಲ್ಲಿ

ಕಂಡುಬಂದ ಯಾವುದೇ ಅಥವಾ ಯಾರೇ ಆಗಲಿ ತೊರೆಯಲ್ಪಟ್ಟ ಮಕ್ಕಳನ್ನು ವಶಕ್ಕೆ ಪಡೆದಲ್ಲಿ ಅಥವಾ ಯಾರಾದರೂ ಬಿಟ್ಟು ಹೋದ, ಕೊಟ್ಟು ಹೋದ ಅಥವಾ ಕಳೆದು ಹೋದ, ಕುಟುಂಬದವರಿಲ್ಲದೆ ಮಗು, ಮಕ್ಕಳು ಅನಾಥ ಎಂದು ಕಂಡುಬಂದಲ್ಲಿ ಪ್ರಕರಣಗಳಿಗೆ ತಕ್ಕಂತೆ ಪ್ರಯಾಣದ ಸಮಯವನ್ನು ಹೊರತುಪಡಿಸಿ 24 ಗಂಟೆ ಒಳಗೆ ಮಕ್ಕಳ ಸಹಾಯವಾಣಿಗೆ ಮಾಹಿತಿಯನ್ನು ನೀಡಲೇಬೇಕು ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಮಕ್ಕಳ ಕಲ್ಯಾಣ ಸಮಿತಿಗೆ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿಯನ್ನು ನೀಡಬೇಕು ಅಥವಾ ನೊಂದಹಿತವಾದ ಮಕ್ಕಳ ಪೋಷಣಾ ಸಂಸ್ಥೆಗಳಿಗೆ ಮಗುವನ್ನು ಒಪ್ಪಿಸಬೇಕು ಈ ಮೇಲೆ ಸೂಚಿಸಿರುವ ಪ್ರಕರಣಕ್ಕೆ ತಕ್ಕ ಹಾಗೆ ಕೇಂದ್ರ ಸರ್ಕಾರ ಅಥವಾ ಮಕ್ಕಳ ಕಲ್ಯಾಣ ಸಮಿತಿ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ಮಕ್ಕಳ ಪೋಷಣಾ ಸಂಸ್ಥೆಗಳ ನಿರ್ದಿಷ್ಟ ಪಡಿಸಿದ ಅಂತರ್ಜಾಲಗಳಲ್ಲಿ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಪ್ರಕಟಿಸಬೇಕು. ಒಂದು ವೇಳೆ ನಿರ್ಧಿಷ್ಟ ಪಡಿಸಿದ ಸಮಯದೊಳಗೆ ಮಗುವಿನ ಬಗ್ಗೆ ಮಾಹಿತಿ ನೀಡದಿದ್ದಲ್ಲಿ ಅಂತ ಕೃತ್ಯವನ್ನು ಅಪರಾಧಿಕ ಕೃತ್ಯವೆಂದು ಪರಿಗಣಿಸಲಾಗುತ್ತದೆ.

***ಪೋಷಣೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳನ್ನು ಕುರಿತು ಆದೇಶಗಳು***

ಸಮಿತಿಯು ಮುಂದೆ ಹಾಜರಾಗುವ ಪೋಷಕತ್ವ ವಂಚಿತ ಮಕ್ಕಳ ಕುರಿತು ತನಿಖೆಯ ಮುಖಾಂತರ ಅಥವಾ ಮಕ್ಕಳ ಕಲ್ಯಾಣ ಅಧಿಕಾರಿಗಳ ಸಾಮಾಜಿಕ ವರದಿಯ ಆಧಾರದ ಮೇಲೆ ಮತ್ತು ಮಗು ಸಾಕಷ್ಟು ಪ್ರಮಾಣದಲ್ಲಿ ಪ್ರೌಢವಾಗಿದ್ದಲ್ಲಿ ಅದರ ಅಭಿಪ್ರಾಯವನ್ನು ಪರಿಗಣಿಸಿ, ಮಕ್ಕಳ ಕಲ್ಯಾಣ ಅಧಿಕಾರಿ ಅಥವಾ ನೇಮಿಸಿದ ಸಾಮಾಜಿಕ ಕಾರ್ಯಕರ್ತರ ಉಸ್ತುವಾರಿ ಸಹಿತವಾಗಿ ಅಥವಾ ರಹಿತವಾಗಿ ಮಗುವನ್ನು ಹೆತ್ತವರು ಅಥವಾ ಪೋಷಕರು ಅಥವಾ ಕುಟುಂಬದೊಡನೆ ಒಗ್ಗೂಡಿಸಲು ಪ್ರಯತ್ನಿಸುವುದು. ಮಗುವಿನ ಕುಟುಂಬವು ಪತ್ತೆ ಆಗದಿದ್ದಲ್ಲಿ ಅಥವಾ ಪತ್ತೆಯಾದರೂ ಸಹ ಮಗುವನ್ನು ಕುಟುಂಬದಲ್ಲಿ ಒಗ್ಗೂಡಿಸುವುದು ಮಗುವಿನ ಹಿತದೃಷ್ಟಿಗೆ ಧಕ್ಕೆಯಾಗುತ್ತದೆ ಎಂಬ ಅಭಿಪ್ರಾಯಕ್ಕೆ ಬಂದರೆ ಮಗುವನ್ನು ನೀಡುವ ಸಂಸ್ಥೆಯ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಬಾಲ ಮಂದಿರ ಅಥವಾ ಅರ್ಹ ಸೌಲಭ್ಯ ಅಥವಾ ವಿಶೇಷ ದತ್ತ ಸಂಸ್ಥೆಯಲ್ಲಿ ದೀರ್ಘಾವಧಿ ಅಥವಾ ತಾತ್ಕಾಲಿಕ ಪೋಷಣೆ ಉದ್ದೇಶಕ್ಕಾಗಿ ಮಗುವನ್ನು ದಾಖಲಿಸಿಕೊಳ್ಳುವುದು. ಮಗುವಿಗೆ ಪೋಷಣೆ ಮತ್ತು ರಕ್ಷಣೆ ಅವಶ್ಯಕತೆ ಇದೆ ಎಂದು ಸಮಿತಿ ಅಭಿಪ್ರಾಯ ಪಟ್ಟರೆ ಈ ಕೆಳಗಿನ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಆದೇಶವನ್ನು ಪಡಿಸಬಹುದು ಪೋಷಕತ್ವ ವಂಚಿತ ಮಗುವಿಗೆ ಪೋಷಣೆ ಮತ್ತು ರಕ್ಷಣೆ ಅವಶ್ಯಕತೆ ಇದೆ ಎಂದು ಘೋಷಿಸುವುದು.

***ದೀರ್ಘಾವಧಿ ಅಥವಾ ತಾತ್ಕಾಲಿಕ ಪೋಷಣೆಗಾಗಿ ಮಕ್ಕಳಿಗೆ ಪುನರ್ವಸಿತಿ ಕಲ್ಪಿಸುವುದು.***

ಬಾಲನ್ಯಾಯ ಕಾಯ್ದೆ ಪರಿಚ್ಛೇದ 44ರಂತೆ ಫಾಸ್ಟರ್ ಕೇರ್ ಒಳಪಡಿಸಲು ಮಕ್ಕಳ ಕಲ್ಯಾಣ ಸಮಿತಿಯು ಆದೇಶ ಮಾಡುವುದು ಬಾಲನ್ಯಾಯ ಕಾಯ್ದೆ ಪರಿಚ್ಛೇದ 45 ಅಡಿಯಲ್ಲಿ ಶಿಕ್ಷಣಕ್ಕಾಗಿ ಪ್ರಯೋಜನ ಅಥವಾ ಪ್ರಯೋಜಕತ್ವಕ್ಕೆ ಆದೇಶ ನೀಡುವುದು ಮಗುವಿನ ಪೋಷಣೆ ಮತ್ತು ರಕ್ಷಣೆ ಮತ್ತು ಪುನರ್ವಸತಿಗಾಗಿ ಯಾವ ವ್ಯಕ್ತಿ ಅಥವಾ ಸಂಸ್ಥೆ ಅಥವಾ ವ್ಯವಸ್ಥೆಯಲ್ಲಿ ಇರಿಸಲಾಗುತ್ತದೆ ಅಂತವರಿಗೆ ತಕ್ಷಣ ನೀಡಲು ಮತ್ತು ಆರೋಗ್ಯ ವೈದ್ಯಕೀಯ ಗಮನ ಮಾನಸಿಕ ಬೆಂಬಲ, ಸಮಾಲೋಚನೆ ಚಿಕಿತ್ಸೆ ಅಥವಾ ಸ್ವಭಾವ ಬದಲಾವಣೆ ಸಿಗುತ್ತದೆ ಕೌಶಲ್ಯ ತರಬೇತಿ ಕಾನೂನು ಸೇವೆ ಶೈಕ್ಷಣಿಕ ಸೇವೆಗಳು ಮತ್ತು ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಮತ್ತು ಮಗುವಿನ ಅನುಸರಣೆಮಾಡಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ರಾಜ್ಯ ಸರ್ಕಾರ ಮತ್ತಿತರ ಸಂಸ್ಥೆಗಳ

ಸಂಯೋಜನೆ ಇಟ್ಟುಕೊಳ್ಳಲು ನಿರ್ದೇಶನ ನೀಡುವುದು. ಬಾಲನ್ಯಾಯ ಕಾಯ್ದೆ ಸೆಕ್ಷನ್ 38 ಅಡಿಯಲ್ಲಿ ದತ್ತು ನೀಡಲು ಮಗುವನ್ನು ಕಾನೂನುನಿಂದ ಮುಕ್ತ ಎಂದು ಸಮಿತಿಯು ಘೋಷಿಸಬಹುದಾಗಿದೆ.

**ಸಂಸ್ಥೆಗಳಲ್ಲಿ ದಾಖಲಾದ ಮಕ್ಕಳ ಕಡತಗಳ ನಿರ್ವಹಣೆ ಮತ್ತು ಅಗತ್ಯತೆ**

ಮಕ್ಕಳ ಪೋಷಣೆ ಮತ್ತು ರಕ್ಷಣೆಯಲ್ಲಿರುವ ಪಾಲನಾ ಕೇಂದ್ರಗಳು ಪ್ರತಿ ಮಗುವಿನ ವೈಯಕ್ತಿಕ ಕಡತಗಳನ್ನು ಗೌಪ್ಯತೆಯಿಂದ ಕಾಪಾಡುವುದರ ಜೊತೆಗೆ ಸಮಿತಿಯು ಸೂಚಿಸಿದ ದಿನಾಂಕದಂದು ಮಗುವಿನ ಕಡತವನ್ನು ಸಮಿತಿಯ ಮುಂದೆ ಮಂಡಿಸಬೇಕು. ಈ ಕಡತವು ಸಾಮಾನ್ಯವಾಗಿ ಮಗುವಿನ ಪ್ರಕರಣ ಕುರಿತು ಸಮಿತಿಯ ಮುಂದೆ ಹಾಜರು ಪಡಿಸಿದ ವ್ಯಕ್ತಿ ಅಥವಾ ಸಂಸ್ಥೆಯ ವರದಿ ಅಥವಾ ಪೊಲೀಸ್ ವರದಿಯನ್ನು ಒಳಗೊಂಡಿರುತ್ತದೆ.

***ಮಕ್ಕಳ ಪಾಲನಾ ಸಂಸ್ಥೆಗಳು ಕಡ್ಡಾಯವಾಗಿ ನಿರ್ವಹಿಸಲೇಬೇಕಾದ 25 ರೀತಿಯ ವಿವಿಧ ವಹಿಗಳು***

ಮಕ್ಕಳ ಪಾಲನಾ ಸಂಸ್ಥೆಗಳು ಕಡ್ಡಾಯವಾಗಿ ನಿರ್ವಹಿಸಬೇಕಾದ 25 ರೀತಿಯ ವಿವಿಧ ವಹಿಗಳಿವೆ. ಅವುಗಳಲ್ಲಿ ಪ್ರಮುಖವಾಗಿ ಪ್ರವೇಶ ಮತ್ತು ಬಿಡುಗಡೆಯ ವಹಿ, ಸಿಬ್ಬಂದಿ ಮತ್ತು ಹಾಜರಾತಿ ಪುಸ್ತಕ, ಆಯವ್ಯಯ ಪಟ್ಟಿ ಕಡತ, ಪ್ರಕ್ರಿಯೆಯಲ್ಲಿರುವ ಮಗುವಿನ ಕಡತ, ಮತ್ತು ನಗದು ಪುಸ್ತಕ ಸೇರಿವೆ. ಇವುಗಳ ಜೊತೆಗೆ ಮಕ್ಕಳ ಸಲಹಾ ಪುಸ್ತಕ, ಆಪ್ತ ಸಮಾಲೋಚನಾ ಪುಸ್ತಕ, ಮಾದಕ ವ್ಯಸನ ನಿರ್ಮೂಲನೆ ಕಾರ್ಯಕ್ರಮಗಳ ನೊಂದಣಿ ಮತ್ತು ಪ್ರಗತಿ ವಹಿ ಮತ್ತು ಕಾರ್ಯಾಬಾರ ವಹಿಸುವ ಪುಸ್ತಕವೂ ಸಹ ಸೇರಿವೆ. ಹೌಸ್ ಕೀಪಿಂಗ್ ಮತ್ತು ನೈರ್ಮಲ್ಯ ವಹಿ, ತಪಾಸಣ ಪುಸ್ತಕ, ಕಾನೂನು ಸೇವಾ ಪುಸ್ತಕ, ಗ್ರಂಥಾಲಯ ಪುಸ್ತಕ ಮತ್ತು ಲಾಗ ಪುಸ್ತಕಗಳೂ ಅವಶ್ಯಕತೆಗೊಳಪಟ್ಟಿವೆ. ಊಟ ಮತ್ತು ಪೌಷ್ಟಿಕಾಂಶದ ವಹಿ, ಪ್ರತಿ ಮಗುವಿನ ವೈದ್ಯಕೀಯ ವಹಿ, ಸಭಾ ನಡುವಳಿಕೆಯ ಪುಸ್ತಕ, ಮಕ್ಕಳ ಸಮಿತಿಯ ಮಧ್ಯಸ್ಥಿಕೆ ಪುಸ್ತಕ, ಮತ್ತು ವ್ಯವಸ್ಥಾಪಕ ಸಮಿತಿಯ ನಡುವೆ ಗಮನವಹಿಸುವ ಪುಸ್ತಕಗಳೂ ಸಹ ಇವೆ. ಅವುಗಳ ಜೊತೆಗೆ ಆದೇಶ ಪುಸ್ತಕ, ವೈಯಕ್ತಿಕ ವಸ್ತುಗಳ ವಹಿ, ಹಾಜರಾತಿ ಪಡೆಯುವ ಪುಸ್ತಕ, ಸಿಬ್ಬಂದಿ ಚಲನ ವಲನ ವಹಿ, ದಾಸ್ತಾನು ಪುಸ್ತಕ, ಹಾಗೂ ಸಂದರ್ಶಕರ ಪುಸ್ತಕವನ್ನೂ ಕಡ್ಡಾಯವಾಗಿ ನಿರ್ವಹಿಸಬೇಕು.

***ಸಾಂಸ್ಥಿಕ ವ್ಯವಸ್ಥೆಯಲ್ಲಿರುವ ಮಕ್ಕಳ ಕುರಿತು ಮಕ್ಕಳ ಪಾಲನಾ ಸಂಸ್ಥೆಗಳು ನಿರ್ವಹಿಸಲೇಬೇಕಾದ ವಹಿಗಳು***

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಸಾಂಸ್ಥಿಕ ವ್ಯವಸ್ಥೆಯಲ್ಲಿರುವ ಮಕ್ಕಳ ಕುರಿತಾದ ಬಹುಮುಖ್ಯ ವಹಿಗಳ ನಿರ್ವಹಣೆ ಅಗತ್ಯವಾಗಿದೆ. ಪ್ರಾರಂಭದಲ್ಲಿ ಪ್ರತಿಯೊಬ್ಬ ಮಗುವಿನ ಹೆಸರು, ಪ್ರಕರಣ ಸಂಖ್ಯೆ, ದಾಖಲಾತಿ ಸಂಖ್ಯೆ, ಮತ್ತು ಪ್ರಕರಣದ ವಿಧದ ವಿವರಗಳನ್ನು ದಾಖಲಿಸಿ, ನಂತರ ಮಗುವನ್ನು ಸಮಿತಿಗೆ ಹಾಜರು ಪಡಿಸಿದ ವ್ಯಕ್ತಿಯ ಲಿಖಿತ ಹೇಳಿಕೆ, ಎಫ್ ಐ ಆರ್ ಪ್ರತಿ, ಮತ್ತು ಮಿಸಿಂಗ್ ಚೈಲ್ಡ್ ಟ್ರಾಕಿಂಗ್ ನಂಬರ್ ಅನ್ನು ಸೇರಿಸಬೇಕು. ತಾತ್ಕಾಲಿಕ ಪುನರ್ವಸಿತಿಗಾಗಿ ಮ.ಕ.ಸ ಆದೇಶ, ಮಗುವಿನ ವೈಯಕ್ತಿಕ ಸ್ವತ್ತಿನ ಪಟ್ಟಿ, ಮತ್ತು ಸಾಮಾಜಿಕ ತನಿಖಾ ವರದಿ ಮೊದಲಾದ ಮಹತ್ವದ ದಾಖಲೆಗಳನ್ನೂ ಹೊಂದಿರಬೇಕು. ಮಕ್ಕಳ ವೈಯಕ್ತಿಕ ಮಾಹಿತಿ, ಕುಟುಂಬದ ಪಡಿತರ ಚೀಟಿ, ಕುಟುಂಬದ ಆದಾಯ ಪ್ರಮಾಣ ಪತ್ರ, ಮತ್ತು ಮಗುವಿನ ವೈದ್ಯಕೀಯ ಮತ್ತು ಮಾನಸಿಕ ಆರೋಗ್ಯದ ಕುರಿತ ವರದಿಗಳನ್ನೂ ಸೇರಿಸಬೇಕು. ಮಗು ಪ್ರಸ್ತುತ ಎಲ್ಲ ದಾಖಲೆಗಳನ್ನು ಹೊಂದಿ ಸಂಸ್ಥೆಯಿಂದ ಹೊರಹೋಗುವಾಗ ಪುನರ್ವಸತಿ ಕಾರ್ಡ್, ಶೈಕ್ಷಣಿಕ ಪ್ರಗತಿ ವರದಿ, ಹಾಗೂ ವೃತ್ತಿ ತರಬೇತಿ ಪ್ರಗತಿ ವರದಿ ಲಭ್ಯವಿರಬೇಕು.

ಮಕ್ಕಳ ವಿಶೇಷ ಸಾಧನೆ, ನಿಯೋಜಿತ ವ್ಯಕ್ತಿ ನೀಡಿದ ವರದಿ, ಮತ್ತು ಮಗು ನೀಡಿದ ದೂರುಗಳು ಮತ್ತು ಅದಕ್ಕೆ ಸಂಬಂಧಿಸಿದ ಕ್ರಮಗಳ ದಾಖಲೆಯೂ

ಅಗತ್ಯವಿದೆ. ಬಿಡುಗಡೆ ಪೂರ್ವ ವರದಿ, ಕುಟುಂಬ ಮತ್ತು ಪೋಷಕರಿಗೆ ಮಗುವನ್ನು ಹಸ್ತಾಂತರಿಸಲು ಅನುಮೋದನೆ, ಮತ್ತು ಪೋಷಣಾ ಸೇವೆಗೆ ಸಂಬಂಧಿಸಿದ ದಾಖಲೆಗಳು ಇಲ್ಲಿವೆ. ಈ ಪ್ರಕ್ರಿಯೆಗಳಲ್ಲಿನ ತಳಹದಿಯನ್ನು ಪೂರೈಸಲು, ಮಗುವಿನ ಸತತ ಉನ್ನತಿ ಮತ್ತು ಪುನರ್ವಸತಿ ಪ್ರಗತಿಯನ್ನು ದೃಢೀಕರಿಸಲು ಈ 58 ವಿವಿಧ ದಾಖಲೆಗಳು ನಿರ್ವಹಿಸಬೇಕಾಗುತ್ತದೆ.

ಸಮಾರೋಪ:

ಈ ಸಂಶೋಧನಾ ಪ್ರಬಂಧವು ಮಕ್ಕಳ ನ್ಯಾಯ ವ್ಯವಸ್ಥೆಯು ಮಕ್ಕಳ ಹಕ್ಕುಗಳ ನಿರ್ವಹಣೆ ಮತ್ತು ಅವರ ಕಲ್ಯಾಣಕ್ಕಾಗಿ ಒದಗಿಸಿದ ಸೌಲಭ್ಯಗಳ ಅಗತ್ಯತೆಯನ್ನು ಕುರಿತು ವಿಶ್ಲೇಷಣೆ ಮಾಡಿದೆ. ಪ್ರಾಥಮಿಕವಾಗಿ ಮಕ್ಕಳಿಗೆ ಸಮರ್ಪಕ ಪೋಷಣೆ ಮತ್ತು ರಕ್ಷಣೆ ನೀಡುವ ವಿಧಾನಗಳು ಮತ್ತು ಈ ವ್ಯವಸ್ಥೆಯಲ್ಲಿನ ಬಲಹೀನತೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ. ಇಂದಿಗೂ ಕೂಡ ನ್ಯಾಯಾಂಗ ಪ್ರಕ್ರಿಯೆಗಳ ಅಡಿಯಲ್ಲಿ ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಹಲವಾರು ತೊಡಕುಗಳಿವೆ. ಒಟ್ಟಾರೆಯಾಗಿ ನಿರಂತರ ಪ್ರಗತಿಗೆ ಸಮರ್ಥ ಯೋಜನೆಗಳು, ಸಮನ್ವಯ ಮತ್ತು ಪಾಲನಾ ಕಾರ್ಯಯೋಜನೆಗಳನ್ನು ಮತ್ತಷ್ಟು ಬಲಪಡಿಸಿ, ಸಮಗ್ರ ರಕ್ಷಣಾ ಕ್ರಮಗಳನ್ನು ಅನುಸರಿಸುವುದರ ಜೊತೆಗೆ ಮಕ್ಕಳ ನ್ಯಾಯಕ್ಕಾಗಿ ಸಮರ್ಥಿತ ಭರವಸೆಯ ಕ್ರಮಗಳನ್ನು ಮೂಡಿಸುವಲ್ಲಿ ಮುಖ್ಯಪಾತ್ರ ವಹಿಸುತ್ತವೆ.

**ಪರಾಮರ್ಶನ ಗ್ರಂಥಗಳು**


- *ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸಭೆಗೆ ಸಲ್ಲಿಸಿದ ಮಾಹಿತಿ.* (2024, ಅಕ್ಟೋಬರ್). ಮಕ್ಕಳ ರಕ್ಷಣಾ ನಿರ್ದೇಶನಾಲಯ, ಕರ್ನಾಟಕ
- *ಮಕ್ಕಳ ನ್ಯಾಯಕಾಯ್ದೆ ಮಾದರಿ ನಿಯಮಗಳು 2016 ಮತ್ತು ಮಾದರಿ ನಿಯಮಗಳು ತಿದ್ದುಪಡಿ ನಿಯಮಗಳು 2022.* (2016). ಭಾರತ ಸರ್ಕಾರ
- *ಮಿಷನ್ ವಾತ್ಸಲ್ಯ ಕೈಪಿಡಿ.* (2022). ಮಕ್ಕಳ ರಕ್ಷಣಾ ನಿರ್ದೇಶನಾಲಯ.
- *ಮಿಷನ್ ವಾತ್ಸಲ್ಯ ಅನುಷ್ಠಾನ ಮಾರ್ಗಸೂಚಿಗಳು. (2022).* ಮಕ್ಕಳ ರಕ್ಷಣಾ ನಿರ್ದೇಶನಾಲಯ, ಕರ್ನಾಟಕ ಸರ್ಕಾರ.
- ವಾಸುದೇವ ಶರ್ಮಾ,ಎನ್.ವಿ. & ಸತೀಶ್, ಜಿ. ಸಿ. (2017). ಮಕ್ಕಳ ನ್ಯಾಯಕಾಯ್ದೆ–2015. ಚೈಲ್ಡ್ ರೈಟ್ಸ್ ಟ್ರಸ್ಟ್ ಮತ್ತು ಬಾಲ್ಯ.
- Bajpai, A. (2018). The juvenile justice (care and protection of children): An analysis. *Indian Law Review*, *2*(2), 191-203.
- *Integrated Child Protection Scheme*. Department of Women and Child Development, Government of Karnataka.